# ಅಪರೂಪದ ಹ್ಯಾಂಡ್‌ಬಿಲ್!



ಸ್ವಾತಂತ್ರ್ಯಪೂರ್ವದಲ್ಲಿ ಅಚ್ಚಾದ ಯಕ್ಷಗಾನದ 'ಹ್ಯಾಂಡ್‌ಬಿಲ್' (ಕರಪತ್ರ) ಇದು! ಇದರ ವಯಸ್ಸು 79! ಸ್ವಾತಂತ್ರ್ಯ ಪೂರ್ವದಲ್ಲಿ ಅಂಕೋಲೆಯ ಶ್ರೀ ಗಜಾನನ ಪ್ರೆಸ್‌ನಲ್ಲಿ ಇದು ಜನಿಸಿತು! ಅಂದಿನ ಭಾವಿಕೇರಿಯ ಹೊಸ ರಾಜ ಮಾರ್ಗಕ್ಕೆ ಹೊಂದಿಕೊಂಡ ಕೇಣಿ ಬೈಲಿನಲ್ಲಿ 17–04–1942ರ ಶುಕ್ರವಾರದಂದು ರಾತ್ರಿ ಹತ್ತು ಗಂಟೆಗೆ ಬಾಸ್ಗೋಡಿನ ಯಕ್ಷಗಾನ ಸುಭೋದ ನಾಟಕ ಮಂಡಲವು ನಡೆಸಿದ 'ಭೀಷ್ಮ ವಿಜಯ' ಯಕ್ಷಗಾನ ಪ್ರಸಂಗದ ಹ್ಯಾಂಡ್‌ಬಿಲ್ ಇದು!

ಬಾಸ್ಗೋಡಿನ ಮಾಣಿ ಬೊಮ್ಮಯ್ಯ ನಾಯಕರ ವ್ಯವಸ್ಥಾಪಕತ್ವದಲ್ಲಿ ನಡೆದ ಈ ಯಕ್ಷಗಾನದಲ್ಲಿ ಮಹಿಳಾ ಪ್ರೇಕ್ಷಕರಿಗೆ ಪ್ರತ್ಯೇಕ ಆಸನದ ವ್ಯವಸ್ಥೆ ಕಲ್ಪಿಸಲಾಗಿತ್ತು. ಯಕ್ಷಗಾನ ರಂಗದ ಅಂದಿನ ಕಲಾವಿದರಾದ ರಾಮ ನಾಯಕ ಭಾವಿಕೇರಿ ಭೀಷ್ಮನಾಗಿ, ಸಣ್ಣ ಹೆಗಡೆ ಪರಶುರಾಮನಾಗಿ, ತಿಮ್ಮಣ್ಣ ನಾಯಕ ಭಾವಿಕೇರಿ ಪ್ರತಾಪಸೇನನಾಗಿ, ರಾಮಚಂದ್ರ ನಾಯಕ ವಂದಿಗೆ ಸಾಲ್ವನಾಗಿ, ಮೋನಪ್ಪ ನಾಯಕ ಅಂಬೆಯಾಗಿ, ರಾಮ ಶೇಟ ಬಾಸ್ಗೋಡ ಏಕಲವ್ಯನಾಗಿ ಪಾತ್ರ ನಿರ್ವಹಿಸಿದ್ದರು. ಒಂದನೇ ಕ್ಲಾಸ್ ಖುರ್ಚಿಗೆ 12 ಆಣೆ, ಎರಡನೇ ಕ್ಲಾಸ್ ಕುರ್ಚಿಗೆ 8 ಆಣೆ, ಬೇಂಚಿಗೆ 6 ಆಣೆ, ಮುಂದಿನ ನೆಲಕ್ಕೆ 3 ಆಣೆ ಮತ್ತು ಹಿಂದಿನ ನೆಲಕ್ಕೆ 2 ಆಣೆಗಳನ್ನು ಪ್ರೇಕ್ಷಕರಿಗೆ ಟಿಕೆಟ್ ನಿಗದಿಪಡಿಸಲಾಗಿತ್ತು.

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ



# ಪೇರಳೆ ಎಲೆಗೆ ಹುಳುಸೈನ್ಯ ದಾಳಿ

ಪೇರಳೆ ಮರದ ಎಳೆಯ ಎಲೆಯನ್ನು ತಿನ್ನಲು ಕೊಂಬೆಯ ಮೇಲೆ ಹುಳುವೊಂದು ತೆವಳುತ್ತಾ ಬಂದಿತು. ತನ್ನ ಮೊನಚಾದ ಬಾಯಲ್ಲಿ ಕಿರುಗತ್ತಿಯನ್ನು ಅಡಗಿಸಿಟ್ಟಿತ್ತೇನೋ ಎಂಬಂತೆ ಮೆಲ್ಲಗೆ ಪರಪರ ಶಬ್ದ ಮಾಡುತ್ತಾ ಎಲೆಯ ಪರಿಧಿ ಮೇವನ್ನು ಮೆಲ್ಲುತ್ತಿತ್ತು. ಕೆಲವೇ ನಿಮಿಷಗಳ ಅಂತರದಲ್ಲಿ ಅದೇ ಗಿಡದ ಅದೇ ಎಲೆಯನ್ನು ಮೇಯಲು ಬೇರೆಡೆಯಿಂದ ನಾಲ್ಕಾರು ಹುಳುಗಳು ಬಂದವು. ಅಕ್ಕಪಕ್ಕದಲ್ಲಿ ಇಂತಹುದೇ ಹಲವು ಎಳೆಯ ಎಲೆಗಳಿದ್ದರೂ ಅವುಗಳನ್ನು ಬಿಟ್ಟು ಅದೇ ಎಲೆಗೆ ಏಕೆ ದಂಡೆತ್ತಿ ಬಂದವೋ ತಿಳಿಯಲಿಲ್ಲ. ನೋಡನೋಡುತ್ತಿದ್ದಂತೆ ಎರಡರಿಂದ ಆರಕ್ಕೆ ಅವುಗಳ ಸಂಖ್ಯೆ ಏರಿಕೆ ಕಂಡಿತು. ಇಡೀ ಎಲೆಯ ಮೈಯನ್ನು ಸಂಪೂರ್ಣ ಆವರಿಸುವಂತೆ ಮುತ್ತಿಗೆ ಹಾಕಿದ ಈ ಹುಳುಗಳು ಮರು ನಿಮಿಷದಲ್ಲಿ ಎಲೆಯನ್ನು ಸ್ವಾಹ ಮಾಡಿ, ಚದುರಿದವು! ಇಷ್ಟಕ್ಕೂ ಆ ಒಂದೇ ಎಲೆಯಲ್ಲಿ ಅದೇನು ವಿಶೇಷತೆ ಅವುಗಳಿಗೆ ಕಂಡಿತ್ತೋ ಅಥವಾ ಅವು ಆಹಾರ ಸೇವಿಸುವ ವಿಧಾನವೇ ಹಾಗಿತ್ತೋ ಅಥವಾ ಮನುಷ್ಯನ ಈರ್ಷಾಗುಣ ಅವುಗಳಿಗೂ ಬಂದಿತ್ತೋ ಒಂದೂ ತಿಳಿಯದು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

# 11 ಕೆ.ಜಿ.ಯ ಕುಡುಗೋಲು!

ರೈತರು ಬಳಸುವ ಕುಡುಗೋಲು ಸಾಮಾನ್ಯವಾಗಿ ಒಂದು ಕೆ.ಜಿ.ಗಿಂತ ಕಡಿಮೆ ಇರುತ್ತವೆ. ಆದರೆ ಈ ಚಿತ್ರದಲ್ಲಿ ವ್ಯಕ್ತಿಯೊಬ್ಬರು ಹಿಡಿದಿರುವ ಕುಡಗೋಲಿನ ತೂಕ ಬರೋಬ್ಬರಿ 11 ಕೆ.ಜಿ.! ಇದು ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಕೂಲಹಳ್ಳಿ ಮದ್ದಾನಸ್ವಾಮಿ ಮಠದಲ್ಲಿದೆ. ಹಿಂದೆ ಶರಣರು ಧವಸ ಧಾನ್ಯಗಳನ್ನು ಕೊಯ್ಯಲು ಇದನ್ನು ಬಳಸುತ್ತಿದ್ದರು ಎಂಬುದು ಭಕ್ತರ ಮಾತು. ಇಂದಿಗೂ ಇದನ್ನು ಸಂರಕ್ಷಿಸಿಕೊಂಡು ಬರಲಾಗಿದ್ದು, ಸ್ವಾಮಿಗೆ ಪೂಜೆ ಸಲ್ಲಿಸುವಾಗ ಇದನ್ನೂ ಪೂಜಿಸಲಾಗುತ್ತದೆ.

—ಸ್ವರೂಪ್ ಕೊಟ್ಟೂರು, ವಿಜಯನಗರ






# ಸೀಡ್ ಬಾಲ್ ಉಡುಗೊರೆ

ಕೆನರಾ ಬ್ಯಾಂಕಿನಿಂದ ನಿವೃತ್ತಿ ಪಡೆದು ನನ್ನಂತೆ ವಿಶ್ರಾಂತ ಜೀವನ ಸಾಗಿಸುತ್ತಿರುವ ರತ್ನಾಕರ್ ಶೇಟ್ ಕುಟುಂಬದ ವಿವಾಹ ಕಾರ್ಯಕ್ರಮದ ವಿಶೇಷ ಫೋಟೊ ಇದು. ದಾವಣಗೆರೆಯ ರತ್ನಾಕರ್ ಅವರ ಪುತ್ರಿಯ ವಿವಾಹ ಕಾರ್ಯಕ್ರಮಕ್ಕೆ ಈಚೆಗೆ ಹೋಗಿದ್ದೆ. ಕಲ್ಯಾಣಮಂಟಪ ಪ್ರವೇಶದ್ವಾರದಲ್ಲಿ ಸ್ವಾಗತಕಾರರು ಅರಿಶಿಣ, ಕುಂಕುಮ, ಬಳೆಗಳು ಹಾಗೂ ಗುಲಾಬಿ ಹೂವಿನೊಂದಿಗೆ 'ತರಕಾರಿ ಬೀಜಗಳ' (ಸೀಡ್ ಬಾಲ್) ಪಾಕೆಟ್ ನೀಡುತ್ತಿದ್ದದ್ದು ವಿಶೇಷವಾಗಿತ್ತು. ಪ್ರತಿಯೊಂದು ಪಾಕೆಟನಲ್ಲಿ ಮೂರು ಬಗೆಯ ಸೀಡ್ ಬಾಲ್‌ಗಳಿದ್ದವು. ಬದನೇಕಾಯಿ ಬೀಜ, ಬೆಂಡೆಕಾಯಿ ಬೀಜ ಹಾಗೂ ಮೆಣಸಿನಕಾಯಿ ಬೀಜ ಸೇರಿದಂತೆ ಹಲವು ತರಕಾರಿ ಬೀಜಗಳು ಅಡಗಿದ್ದ ಗೋಲಿ ಆಕಾರದ ಮಣ್ಣಿನ ಉಂಡೆಗಳ ಪಾಕೆಟ್ ನೀಡಿದರು. ಆ ಪಾಕೆಟ್ ಮೇಲೆ ಸೀಡ್ ಬಾಲ್ ಅನ್ನು ಕೈತೋಟದಲ್ಲಿ ಹೇಗೆ ಬಿತ್ತನೆ ಮಾಡಬೇಕು ಎಂಬ ಮಾಹಿತಿಯನ್ನು ಮುದ್ರಿಸಲಾಗಿತ್ತು. ಇದು ವಿಶ್ವ ಪರಿಸರ ಮಾಸಾಚರಣೆಯ ವಿಶೇಷ ಅಂದರೆ ತಪ್ಪಾಗದು.

—ರಘುನಾಥರಾವ್ ತಾಪ್ಸೆ, ದಾವಣಗೆರೆಯ